29	ಚಿಕ್ಕಬಳ್ಳಾಪುರ	ಚಿಂತಾಮಣಿ	1061
		ಬಾಗೇಪಲ್ಲಿ	458
		ಒಟ್ಟು	250335

ಕರ್ನಾಟಕ ವಿಧಾನ ಸಭೆ

307 ಶ್ರೀ ಜಯಚಂದ್ರ ಟಿ.ಬಿ.

ಜಲ ಸಂಪನ್ಮೂಲ ಸಚಿವರು

ಅ) ಗೋದಾವರಿ ನದಿ ಮೂಲದಿಂದ ರಾಜ್ಯಕ್ಕೆ ಹಂಚಿಕೆಯಾಗಿರುವ ನೀರಿನ ಪ್ರಮಾಣ ಎಷ್ಟು?

ಗೋದಾವರಿ ನದಿ ಮೂಲದಿಂದ ರಾಜ್ಯಕ್ಕೆ 22.37 ಟಿಎಂಸಿ ಹಂಚಿಕೆಯಾಗಿರುತ್ತದೆ.

ಆ) ಅದರ ಉಪಯೋಗಕ್ಕಾಗಿ ಕೇಂದ್ರದ ಮತ್ತು ಕೇಂದ್ರ ಸಂಸ್ಥೆಗಳಿಂದ ಅನುಮತಿ ದೊರೆತಿದೆಯೇ?

ಕೇಂದ್ರ ಸರ್ಕಾರದ ಯೋಜನಾ ಆಯೋಗದಿಂದ ಅನುಮೋದನೆ ದೊರೆತಿರುತ್ತವೆ.

ಇ) ಹಾಗಿದ್ದಲ್ಲಿ, ಯಾವಾಗ ಅನುಮತಿ ದೊರೆತಿದೆ, ಅದರ ಬಳಕೆಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳು ಮತ್ತು ಮಾರ್ಗಗಳು ಯಾವುವು? (ವಿವರ ನೀಡುವುದು)

ಗೋದಾವರಿ ಕಣಿವೆಯಲ್ಲಿ ಲಭ್ಯವಾಗಿರುವ 22.37 ಟಿಎಂಸಿಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಡಿ ಮಂಜೂರಾತಿ ದೊರೆತಿರುವ ವಿವರಗಳು ಈ ಕೆಳಕಂಡಂತಿದೆ.

<u>ಕಾರಂಜಾ ಯೋಜನೆಗೆ</u> ಕೇಂದ್ರದ ಯೋಜನಾ ಆಯೋಗದ ಪತ್ರ ಸಂಖ್ಯೆ: (284)88 I and CAD dated 03-08-92 for Rs.98.00 Crores (Planning Commission, New Delhi). ರಲ್ಲಿ ಅನುಮತಿ ನೀಡಲಾಗಿದೆ. ಬಹುತೇಕ ಪೂರ್ಣಗೊಂಡಿದ್ದು, 2008–09ನೇ ಸಾಲಿನಲ್ಲಿ ನೀರಾವರಿಗಾಗಿ ನೀರನ್ನು ಹರಿಬಿಡಲಾಗಿದೆ.

<u>ಚುಳಕಿನಾಲಾ ಯೋಜನೆಗೆ</u> ಕೇಂದ್ರದ ಯೋಜನಾ ಆಯೋಗದ ಪತ್ರ ಸಂಖ್ಯೆ: No.UU 20(6) 77 I and CAD dated 07-02-77 for Rs.379.76 Lakhs (Planning Commission, New Delhi) ರಲ್ಲಿ ಅನುಮತಿ ನೀಡಲಾಗಿದೆ. ಈಗಾಗಲೇ ಯೋಜನೆಯು 2001 ರಲ್ಲಿ ಪೂರ್ಣಗೊಂಡಿರುತ್ತದೆ.